ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,

ಶಹಾಪೂರ

ಸಿ.ಡಬ್ಲ್ಯೂ 1 ಪಿ.ಡಬ್ಲ್ಯೂ1

ಸಿ.ಸಿ. ನಂ. 59//2021

ಪ್ರಮಾಣ ವಚನ ಭೋದಿಸಿದ ದಿನಾಂಕಃ 21-08-2024
ಮುಂದುವರೆದ ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

4. ಅದನ್ನು ದಿಃ 16-08-2020 ರಂದು ಉಪ ಕೃಷಿ ನಿರ್ದೇಶಕರು ಬೆಳಗಾವಿ ಇಲ್ಲಿಗೆ ಪರೀಕ್ಷೆಗಾಗಿ ಕಳುಹಿಸಿ ಕೊಟ್ಟಿರುತ್ತೇವೆ. ದಿಃ 30-08-2020 ರಂದು ಪರೀಕ್ಷಾ ವರದಿ ಬಂದಿರುತ್ತದೆ. ಸದರಿ ವರದಿಯಲ್ಲಿ ಡಿಎಪಿ ಗೊಬ್ಬರದಲ್ಲಿ ಇರಬೇಕಾದ ಸಾರಜನಕದ ಪ್ರಮಾಣ 18% ಬದಲಿಗೆ 1.26% ಮಾತ್ರ ಇದ್ದಿತ್ತು. ರಂಜಕದ ಪ್ರಮಾಣ 46% ಬದಲಿಗೆ 1.62% ಮಾತ್ರ ಇದ್ದಿತ್ತು. ಹಾಗಾಗಿ ಆ ದಿನ ಜಪ್ತಿಪಡಿಸಿಕೊಂಡ ಗೊಬ್ಬರ ನಕಲಿ ಡಿಎಪಿ ಗೊಬ್ಬರ ಎಂದು ಖಾತರಿಪಡಿಸಿಕೊಡೇವು. ಸದರಿ ಪರೀಕ್ಷಾ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ನಂತರ ಅದನ್ನು ತನಿದಿಖಾಧಿಕಾರಿಯವರಿಗೆ ಕವರಿಂಗ ಲೇಟರ ಜೊತೆಯಲ್ಲಿ ಕಳುಹಿಸಿ ಕೊಟ್ಟಿರುತ್ತೇನೆ. ಸದರಿ ಕವರಿಂಗ ಲೇಟರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿತರ ಪರ ಶ್ರೀ ಟಿ.ಎನ್. ವಕೀಲರಿಂದಃ

ಆ ದಿನ ಸಾಯಂಕಾಲ 4.45 ಗಂಟೆ ಸಮಾರಿಗೆ ನನಗೆ ಭಾತ್ಮಿ ಬಂದಿತ್ತು. ಆ ಕಾಲಕ್ಕೆ ನಾನು ಮತ್ತು ಚಾಸಾ6 ರವರು ಇದ್ದೇವು. ಆ ದಿನ ನಮಗೆ ಬಂದ ಭಾತ್ಮಿಯ ಬಗ್ಗೆ ನಾವು ನಮ್ಮ ಮೇಲಾಧಿಕಾರಿಗಳಿಗೆ 4.48 ನಿ. ಕ್ಕೆ ಮಾಹಿತಿ ನೀಡಿರುತ್ತೇವೆ. ನಂತರ ನಾವು ಭೀ ಗುಡಿ ಠಾಣೆಗೆ ಬಂದಾಗ ಸಾ.5.00 ಗಂಟೆ ಆಗಿತ್ತು. ಪಂಚರನ್ನು ನಾನೇ ಕರೆಸಿರುತ್ತೇನೆ. ಚಾಸಾ2 ಮತ್ತು 3 ಪಂಚರು ನನಗೆ ಪರಿಚಯುದವರಾಗಿರುತ್ತಾರೆ. ಚಾಸಾ2 ಸಂತೋಷ ಇತನು ಸುರಪೂರ ದವನಾಗಿರುತ್ತಾನೆ ಚಾಸಾ3 ಚೆನ್ನಪ್ಪ ಗೌಡ ಇತನು ರಸ್ತಾಪೂರ ಗ್ರಾಮದವನಾಗಿರುತ್ತಾನೆ. ಚಾಸಾ2 ಮತ್ತು 3 ರವರು ಠಾಣೆಗೆ ಸಾ.5.05 ಗಂಟೆ ಸಮಾರಿಗೆ ಬಂದಿರುತ್ತಾರೆ. ಚಾಸಾ2 ಮತ್ತು 3 ರವರು ಶಹಾಪುಹುದಿಂದ ಬಂದಿದ್ದರು. ದೂರಿನಲ್ಲಿ ಚಾಸಾ2 ಮತ್ತು 3 ರವರು ಶಹಾಪೂರನಿಂದ ಬಂದಿದ್ದರು ಎನ್ನುವ ಬಗ್ಗೆ ಹೇಳಿ ಬರೇಸಿರುವುದಿಲ್ಲ.

2. ಭೀ ಗುಡಿ ಠಾಣೆಯಿಂದ ಕೋಡಮನಹಳ್ಳಿ ಕ್ರಾಸ್ ಅಂದಾಜು8 ಕಿ.ಮಿ. ದೂರದಲ್ಲಿರುತ್ತದೆ. ಸದರಿ ಕ್ರಾಸ್ ರಾ.ಹೆ. ಹೊಂದಿಕೊಂಡತೆ ಇರುತ್ತದೆ ಎಂದರೆ ಸರಿ. ಸದರಿ ಹೆದ್ದಾರಿ ಮೇಲೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಾವು ಕೊಡಮನಹಳ್ಳಿ ಕ್ರಾಸ್ ಹತ್ತಿರ

ಹೋದಾಗ ಸಮಯ ಸಾ. 5.30 ಗಂಟೆ ಆಗಿತ್ತು. ಅಲ್ಲಿ ನಾವು ಲಾರಿಯನ್ನು ಅಂದಾಜು 50 ಮೀಟರ ದೂರದಿಂದ ನೋಡಿರುತ್ತೇವೆ. ಸದರಿ ಲಾರಿ ಚಾಲಕ ಯಾವ ಬಣ್ಣದ ಶರ್ಟ್ ತೊಟ್ಟಿಕೊಂಡಿದ್ದ ಎಂದು ನನಗೆ ಹೇಳಲು ಆಗುವುದಿಲ್ಲ. ಮೂಡಬೂಳ ದಿಂದ ಇಟಗಾ ಗ್ರಾಮಕ್ಕೆ ಅಂದಾಜು 8 ಕಿ.ಮೀ. ಅಂತರವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೂಡಬೂಳ ದಿಂದ ಇಟಗಾ ಗ್ರಾಮಕ್ಕೆ ಹೋಗಬೇಕಾದರೇ ಕೋಡಮನಹಳ್ಳಿ ಕ್ರಾಸ್ ಗೆ ಬರುವ ಅವಶ್ಯಕತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಆ ಗೊಬ್ಬರವನ್ನು ಮಲ್ಲಣ್ಣ ದ್ಯಾವಗೊಂಡ ಇವರ ಗೋಡನಿಂದ ತೆಗೆದುಕೊಂಡು ಬರಲಾಗಿತ್ತು. ಸದರಿ ಗೋಡಾನ ಗೆ ನಾನು ಬೇಟಿ ನೀಡಿರುವುದಿಲ್ಲ. ಮಲ್ಲಣ್ಣ ದ್ಯಾವಗೊಂಡ ಇವರ ಗೋಡಾನ ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಗೋಡಾನಲ್ಲಿ ಎನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಗೊಬ್ಬರವನ್ನು ತುಂಬಿರುವ ಚೀಲ ಪೊಲೀಸ್ ಠಾಣೆಯಲ್ಲ್ ತೂಕ ಮಾಡಿಸಿರುತ್ತೇವೆ. ತೂಕ ಮಾಡುವ ಮಶೀನ್ ನಮ್ಮ ಕಚೇರಿಯಿಂದ ತಂದಿದ್ದೇವು. ಆ ಬ್ಬೆಗ ನಮ್ಮ ದೂರಿನಲ್ಲಿ ನಮೂದಿಸಿರುವುದಿಲ್ಲ. ಸದರಿ 298 ಚೀಲಗಳಲ್ಲಿ ಗೊಬ್ಬರ ಇರುತ್ತದೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಖಾತರಿ ಮಾಡಿಕೊಳ್ಳಲು ಎಲ್ಲಾ ಚೀಲಗಳನ್ನು ಪರೀಕ್ಷೆ ಮಾಡಿರುವುದಿಲ್ಲ. 4 ಚೀಲಗಳಿಂದ ಮಾತ್ರ ಗೊಬ್ಬರ ಯಾಕೇ ತೆಗೆದಿದಿಃರಿ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು Random ಪರೀಕ್ಷೆ ಮಾಡಲು ಆ ರೀತಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಉಳಿದ 294 ಚೀಲಗಳನ್ನು ನಾವು ಪರಿಶೀಲನೆ ಮಾಡಿರುವುದಿಲ್ಲ.

3. ಆ ದಿನ ಲಾರಿಯನ್ನು ತಡೆದು ನಿಲ್ಲಿಸಿ ಪರಿಶೀಲಿಸುವ ಕಾಲಕ್ಕೆ ಸಮಯ ಸಾಯಂಕಾಲ 5.40 ಆಗಿತ್ತು. ಕೊಡೇಮನಹಳ್ಳಿ ಕ್ರಾಸ್ ಹತ್ತಿರ ಗುನ್ಹಾ ಸ್ಥಳದ ಪಂಚನಾಮೆ ಮಾಡಲಾಗಿದೆ. ಗುನ್ಹಾ ಸ್ತಳದಲ್ಲಿ ಎಲ್ಲಾ ಪ್ರಕ್ರಿಯೆ ಮಾಡಲು 1 ಗಂಟೆ ಸಮಯ ಹಿಡಿದಿರುತ್ತದೆ. ಗುನ್ಹ ಸ್ತಳದ ದಕ್ಷಿಣದ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಉಳಿದ ದಿಕ್ಕಿನ ಚೆಕ್ ಬಂದಿ ಹೇಳಲು ಆಗುವುದಿಲ್ಲ, ಸಾಕ್ಷಿ ಸ್ವತಹ ಮುಂದುವರೆದು ಅಲ್ಲಿ ಎರಡು ಕಡೆ ರಸ್ತೆ ಮತ್ತು ಎರಡು ಕಡೆ ಹೊಲ ಇರುತ್ತದೆ ಎಂದು ಹೇಳುತ್ತಾರೆ. ಯಾವ ದಿಕ್ಕಿಗೆ ಹೊಲ ಮತ್ತು ಯಾವ ದಿಕ್ಕಿಗೆ ರಸ್ತೆ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

ಮರು ವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.